ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಭಿವೃದ್ಧಿ

2277(3233) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಿಗೆ ಡಾಂಬರೀಕರಣ, ರಸ್ತೆ ಅಗಲಗೊಳಿಸುವುದಕ್ಕೆ ಸಂಬಂಧಿಸಿದಂತೆ ಈ ಸಾಲಿನಲ್ಲಿ ಯಾವ ಯಾವ ರಸ್ತೆಗಳಿಗೆ ಎಷ್ಟೆಷ್ಟು ಹಣವನ್ನು ಮೀಸಲಿಡಲಾಗಿದೆ;

2. ಈ ರಸ್ತೆಗಳ ಅಭಿವೃದ್ಧಿ ಕೆಲಸಗಳ ಬಗ್ಗೆ ಇದುವರೆಗೆ ಆಗಿರುವ ಪ್ರಗತಿ ಹಾಗೂ ಮುಂದೆ ಆಗಬೇಕಿರುವ ಕೆಲಸಗಳ ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

೧. ಮೈಸೂರು ನಗರದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು ೧೭ ರಸ್ತೆಗಳಿದ್ದು ಇವುಗಳ ಒಟ್ಟು ಉದ್ದ ೩೨.೮೨ ಕಿ.ಮೀ.ಗಳಿದ್ದು ಇದರಲ್ಲಿ ೧೧.೪೬ ಕಿ.ಮೀ. ಉದ್ದದ ರಸ್ತೆಯನ್ನು ಮೈಸೂರು ಮಹಾನಗರ ಪಾಲಿಕೆವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕಿನಡಿಯಲ್ಲಿ (ಎ.ಡಿ.ಬಿ.) ಅಭಿವೃದ್ಧಿಪಡಿಸಲು ಹಸ್ತಾಂತರಿಸಲಾಗಿದೆ. ವಿವರ ಅನುಬಂಧ-೧ರಲ್ಲಿ ಪ್ರತ್ಯೇಕವಾಗಿ ಲಗತ್ತಿಸಿದೆ. ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಉಳಿದ ೨೧.೩೬ ಕಿ.ಮೀ. ಉದ್ದದ ರಸ್ತೆಗಳ ನಿರ್ವಹಣೆಗಾಗಿ ಒಟ್ಟಾರೆ ರೂ. ೧.೯೮ಱ ಲಕ್ಷಗಳನ್ನು ಯೋಜನೇತರ ಅಡಿ ೨೦೦೧೦೨ನೇ ಸಾಲಿಗೆ ಮೀಸಲಿಡಲಾಗಿದ್ದು ಈ ಹಣದಲ್ಲಿ ಸದರಿ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ.

೨. ಈ ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕೆಲಸವನ್ನು ಪ್ರಾರಂಭಿಸಲಾಗಿದ್ದು, ಕೆಲಸವು ಪ್ರಗತಿಯಲ್ಲಿರುತ್ತದೆ. ಮುಂದೆ ಆಗಬೇಕಿರುವ ಕೆಲಸಗಳು ೬ ರಸ್ತೆಗಳಿಗೆ ೩೪ ಲಕ್ಷ ರೂ.ಗಳೆಂದು ಅಂದಾಜಿಸಿದೆ. ವಿವರಗಳನ್ನು ಅನುಬಂಧ-೨ ರಲ್ಲಿ ನೀಡಿದೆ.

ಎಲ್‌ಎಕ್ಯೂ ೩೨೩೩

ಅನುಬಂಧ - ೧

ಮೈಸೂರು ವಿಭಾಗ, ಮೈಸೂರು ಲೋಕೋಪಯೋಗಿ ಇಲಾಖೆಯ ನಿರ್ವಹಣೆಯಲ್ಲಿರುವ ಸಿಟಿ (ಜಿಲ್ಲಾ ಮುಖ್ಯರಸ್ತೆ) ರಸ್ತೆಗಳ ವಿವರ

ಕ್ರ.ಸಂ.	ರಸ್ತೆಗಳ ಹೆಸರು	ರಸ್ತೆಯ ದರ್ಜೆ	ರಸ್ತೆಯ ಉದ್ದ	ರಸ್ತೆಯ ಮೇಲ್ಮೈ ವಿವರ ಡಾಂಬರು ರಸ್ತೆ	ಎ.ಡಿ.ಬಿ. ನೀಡಿರುವ ಉದ್ದ	ಇಲಾಖೆಯ ವಶದಲ್ಲಿರುವುದು
೧.	ನಗರ ಜಿಲ್ಲಾ ಕಛೇರಿಗೆ ಸೇರುವ ಅಪ್ರೋಚ್ ರಸ್ತೆ	ಜಿಲ್ಲಾ ಮುಖ್ಯ ರಸ್ತೆ	೦.೩೦	೦.೩೦	--	೦.೩೦
೨.	ವೆಸ್ಟರ್ನ್ ಗೇಟ್‌ನಿಂದ ಜಿಲ್ಲಾ ಕಛೇರಿಗೆ ಸೇರುವ ರಸ್ತೆ	- " -	೧.೩೦	೧.೩೦	--	೧.೩೦
೩.	ಝಾನ್ಸಿ ಲಕ್ಷ್ಮೀಬಾಯಿ ರಸ್ತೆ	- " -	೪.೪೦	೪.೪೦	೪.೪೦	--
೪.	ಡಾ: ಅಂಬೇಡ್ಕರ್ ರಸ್ತೆ	- " -	೨.೦೦	೨.೦೦	--	೨.೨೦
೫.	ಮೈಸೂರು-ಮಾನಂದವಾಡಿ ರಸ್ತೆ (ಪ್ರಭುದೇವ ಟಾಕಿಸಿನಿಂದ ನಂಜುಮಳಿಗೆ	- " -	೪.೪೦	೪.೪೦	೦.೫೨	೩.೮೩
೬.	ಶೇಷಾದ್ರಿ ಅಯ್ಯರ್ ರಸ್ತೆ	- " -	೧.೧೦	೧.೧೦	--	೧.೧೦
೭.	ಫ್ರೆನ್ಸೆಸ್ ರಸ್ತೆ	- " -	೪.೪೦	೪.೪೦	೦.೫೭	೩.೮೩

೧	೨	೩	೪	೫	೬	೭
೮.	ನ್ಯೂ ಬನ್ನಿಮಂಟಪ ರಸ್ತೆ ಹಾಗೂ ಡಿವಿಯೇಷನ್ ರಸ್ತೆ	- " -	೫.೮೦	೫.೮೦	೧.೯೫	೩.೮೫
೯.	ಅಶೋಕ ರಸ್ತೆ	- " -	೨.೨೦	೨.೨೦		೨.೨೦
೧೦.	ಹೈದರಾಲಿ ರಸ್ತೆ	- " -	೨.೮೦	೨.೮೦	೨.೮೦	--
೧೧.	ಅಹ್ಬಾಸ್ ಆಲಿ ರಸ್ತೆ	- " -	೦.೪೦	೦.೪೦	--	೦.೪೦
೧೨.	ಗವರ್ನ್‌ಮೆಂಟ್ ಹೌಸ್ ರಸ್ತೆ	- " -	೦.೮೦	೦.೮೦	--	೦.೮೦
೧೩.	ರೇಸ್‌ಕೋರ್ಸ್ ರಸ್ತೆ (ಮಾನಸರ ರಸ್ತೆ)	- " -	೨.೪೦	೨.೪೦	೦.೩೪	೨.೦೬
೧೪.	ಕಾರಂಜಿ ಬ್ಲಾಕ್ ರಸ್ತೆ	- " -	೧.೪೦	೧.೪೦	೧.೪೦	--
೧೫.	ನರಸಿಂಹ ಬುಲ್ವರ್ಡ್ ರಸ್ತೆ	- " -	೦.೯೦	೦.೯೦		೦.೯೦
೧೬.	ಲಲಿತಮಹಲ್ ರಸ್ತೆ	- " -	೧.೦೦	೧.೦೦		೧.೦೦
೧೭.	ಆಯುರ್ವೇದಿಕ್ ರಸ್ತೆಯಿಂದ ರೈಲ್ವೆ ಸ್ಟೇಷನ್ ವೃತ್ತದವರೆಗೆ	- " -	೦.೬೨	೦.೬೨	--	೦.೬೨
		ಒಟ್ಟು	೩೨.೮೨	೩೨.೮೨	೧೧.೪೬	೨೧.೩೬

2-9-A

ಅನುಬಂಧ - ೨

ಕ್ರಮ ಸಂಖ್ಯೆ	ಕೆಲಸದ ಹೆಸರು	ಅಂದಾಜು ಮೊತ್ತ ರೂ.ಗಳಲ್ಲಿ	ಕೆಲಸದ ವಿವರಗಳು
೧.	ಹೊಸ ಬನ್ನಿಮಂಟಪ ರಸ್ತೆಯ ಅಭಿವೃದ್ಧಿ ಹಾಗೂ ಮರುಡಾಂಬರೀಕರಣ ಸರಪಳಿ ೩.೩೦ ರಿಂದ ೫.೮೦ ಕಿಮೀ.ವರೆಗೆ	೧೨.೦೦	ಸಂತ ಫಿಲೋಮಿನಾ ಕಾಲೇಜಿನಿಂದ ಜೆ.ಎಸ್.ಎಸ್. ದಂತ ವಿಜ್ಞಾನ ಕಾಲೇಜಿನವರೆಗೆ ರಸ್ತೆಯನ್ನು ಅಗಲಗೊಳಿಸುವುದು ಸರಪಳಿ ೩.೩೦ ರಿಂದ ೫.೦೦ ಕಿಮೀ. ವರೆಗೆ ಹಾಗೂ ೩.೩೦ ರಿಂದ ೪.೮೦ ಕಿಮೀ ವರೆಗೆ ಹಾಗೂ ೫.೦೦ ಕಿಮಿ. ಯಿಂದ ೫.೮೦ ಕಿಮಿ. ವರೆಗೆ ೨೫ ಮಿಲಿಮೀಟರ್ ದಪ್ಪದ ಮರುಡಾಂಬರೀಕರಣ (೩.೫೦ ಮೀ ನಿಂದ ೧೨.೦೦ ಮೀ ವರೆಗೆ ಅಗಲಗೊಳಿಸುವ ಸ್ಥಳ ೩.೩೦ ರಿಂದ ೫.೦೦ ಕಿಮಿ.ವರೆಗೆ ಹಾಗೂ ೫.೦೦ ರಿಂದ ೫.೮೦ ಕಿಮಿ.ನಲ್ಲಿ ಟೋಲ್ಗೇಟ್‌ವರೆಗೆ ಮರುಡಾಂಬರೀಕರಣ).
೨.	ಕೆ.ಆರ್.ಎಸ್.ಗೆ ಹೋಗುವ ರಸ್ತೆಯ ಆಯ್ದಭಾಗಗಳಲ್ಲಿ ಅಭಿವೃದ್ಧಿ (ಫ್ರಿನ್ಸಿಸ್ ರಸ್ತೆ 0.00 ಯಿಂದ ೪.೦೦ ಕಿಮೀ.ವರೆಗೆ	೪.೦೦	ಫ್ರಿನ್ಸಿಸ್ ರಸ್ತೆಯ ಸರಪಳಿ ೨ ರಿಂದ ೨.೮೦ ಕಿಮಿ ವರೆಗೆ ಎಡ ಹಾಗೂ ಬಲ ಭಾಗದಲ್ಲಿ ಹಾಗೂ ಸರಪಳಿ ೩.೪೦ ರಿಂದ ೪.೦೦ ಕಿಮಿ. ವರೆಗೆ ಬಲ ಭಾಗದಲ್ಲಿ ಮರುಡಾಂಬರೀಕರಣ.

೧	೨	೩	೪
೩.	ಮೈಸೂರು ನಗರ ರಸ್ತೆಗಳಾದ ಡಾ: ಅಂಬೇಡ್ಕರ್ ರಸ್ತೆಯ ಆಯ್ದ ಭಾಗಗಳಲ್ಲಿ ಮರುಡಾಂಬರೀಕರಣ ೦.೦೦ ಯಿಂದ ೨.೪೦ ಕಿಮೀ.ವರೆಗೆ	೬.೦೦	ಆರ್.ಟಿ.ಓ. ವೃತ್ತದಿಂದ ಅಶೋಕಪುರಂ ಮೂಲಕ ಎ.ಐ.ಇ ಕಾಲೇಜ್ ಹಿಂಭಾಗದಲ್ಲಿ ಮೈಸೂರು ಮಾನಂದವಾಡಿ ರಸ್ತೆಗೆ ಸೇರುವ ಡಾ: ಅಂಬೇಡ್ಕರ್ ಆಯ್ದ ಭಾಗಗಳ ಮರುಡಾಂಬರೀಕರಣ).
೪.	ಮೈಸೂರು ನಗರ ರಸ್ತೆಗಳಾದ ಮಾನಸರ ರಸ್ತೆ (ರೇಸ್‌ಕೋರ್ಸ್‌ರೋಡ್)ಯ ಆಯ್ದ ಭಾಗಗಳಲ್ಲಿ ಮರುಡಾಂಬರೀಕರಣ ಹಾಗೂ ಅಭಿವೃದ್ಧಿ	೬.೦೦	ಇಟ್ಟಿಗೆ ಗೂಡಿನ ಸತ್ಯನಾರಾಯಣ ಸ್ವಾಮಿ ದೇವಸ್ಥಾನದಿಂದ ಎಸ್.ಆರ್.ಟಿ ಗ್ಯಾರೇಜ್‌ನವರೆಗೆ ಮರುಡಾಂಬರೀಕರಣ ಹಾಗೂ ಚರಂಡಿ ವ್ಯವಸ್ಥೆ
೫.	ಮೈಸೂರು ನಗರ ರಸ್ತೆಗಳಾದ ಶೇಷಾದ್ರಿ ಐಯ್ಯರ್ ರಸ್ತೆಯ ಆಯ್ದ ಭಾಗಗಳ ಮರುಡಾಂಬರೀಕರಣ ಪಿ.ಜಿ ಮೆಡಿಕಲ್ ಕಾಲೇಜಿನ ಒಳ ವೃತ್ತದಿಂದ ಆರ್.ಎಂ.ಸಿ. ವೃತ್ತದವರೆಗೆ) ಮರುಡಾಂಬರೀಕರಣ ಸರಪಳಿ ೦.೦೦ ಯಿಂದ ೧.೧೦ ಕಿಮೀ.ವರೆಗೆ	೫.೦೦	ಪಿ.ಜಿ. ಮೆಡಿಕಲ್ ಕಾಲೇಜಿನ ಒಳ ವೃತ್ತದಿಂದ ಆರ್.ಎಂ.ಸಿ. ವೃತ್ತದವರೆಗಿನ ರಸ್ತೆಗೆ ೫೦ ಎಂ.ಎಂ.ಬಿ.ಎಂ. ಹಾಗೂ ೨೦ ಎಂ.ಎಂ.ಬಿ.ಎಂ. ಮರುಡಾಂಬರೀಕರಣ ಸರಪಳಿ ೦.೮೨ ಯಿಂದ ೧.೧೦ ಕಿಮೀ.ವರೆಗೆ
೬.	ಮೈಸೂರು ನಗರ ಲೋಕೋಪಯೋಗಿ ಇಲಾಖೆ ರಸ್ತೆಗಳಲ್ಲಿ ಸಮಗ್ರ ಗುಂಡಿ ಮುಚ್ಚಿಸುವುದು.	೧.೦೦	ದಸರ ಪ್ರಾರಂಭವಾಗುವ ಮುನ್ನ ರಸ್ತೆಗಳಿಗೆ ಸಮಗ್ರ ಗುಂಡಿ ಮುಚ್ಚಿಸುವುದು.
	ಒಟ್ಟು	೩೪.೦೦	